# ಗೋಡೆಗಳು ಬಂಧನಗಳಲ್ಲ

ವಿಶ್ವವಿದ್ಯಾಲಯವೊಂದು ಭಾರತದ ಪ್ರಖ್ಯಾತ ಕವಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಖಾಜಿ ನಜರುಲ್ ಇಸ್ಲಾಮ್ ಅವರ ಪಠ್ಯಗಳನ್ನು ನಿಷೇಧಿಸಿದೆ. ಭಾರತದ ಐಕ್ಯತೆ ಮತ್ತು ಉಜ್ವಲ ಭವಿಷ್ಯದ ಬಗ್ಗೆ ಮುನ್ನೋಟ ಇಲ್ಲದಿರುವವರಿಂದ ಇಂತಹ ಅತಾರ್ಕಿಕ ಫರ್ಮಾನುಗಳು ಹೊರಡುತ್ತವೆ! ಖಾಜಿ ನಜರುಲ್ ಇಸ್ಲಾಮ್ ಅವರು ಬಂಗಾಳಿ ಮಾತೃಭಾಷೆಯ ಕವಿ. ಗುರುದೇವ ರವೀಂದ್ರರ ನಂತರ ಅವರಷ್ಟೇ ಶ್ರೇಷ್ಠ ಕವಿ ಎಂದು ಹೆಸರಾಗಿದ್ದರು. 'ದೇಶಕ್ಕೆ ಸ್ವಾತಂತ್ರ್ಯ ಬರುವವರೆಗೆ ನನಗೆ ಯಾವುದೂ ಬೇಡ' ಎಂದು ಹೇಳಿದ ಕ್ರಾಂತಿಕಾರಿ ಕವಿ. ದೇಶದ ವಿಮೋಚನೆಗಾಗಿ ಹಲವಾರು ತಿಂಗಳು ಜೈಲುವಾಸ ಅನುಭವಿಸಿದ್ದವರು. 'ನಾನು ನನ್ನ ತಾಯ್ನಾಡಿಗೆ ಪ್ರೀತಿಯನ್ನು ಅರ್ಪಿಸಲೆಂದೇ ಹುಟ್ಟಿದವನು' ಎಂದು ಹೇಳಿದ ಇವರನ್ನು 'ಜನತೆಯ ಕವಿ' ಎಂದು ಕರೆಯುತ್ತಾರೆ. ಖಾಜಿ ನಜರುಲ್ ಇಸ್ಲಾಮ್ ತಮ್ಮ ಜೀವಿತದ ಕೊನೆಯ ಮೂವತ್ತು ವರ್ಷಗಳನ್ನು ಮನೋವೈಕಲ್ಯತೆಯಲ್ಲೇ ಕಳೆದರು. ಈಗ ಭಾರತದ ಉನ್ನತ ಶಿಕ್ಷಣ ಸಂಸ್ಥೆಗಳು ದ್ವೇಷ, ಅಸಹನೆಯ ಮನೋವೈಕಲ್ಯಕ್ಕೆ ಒಳಗಾಗಿವೆ. ಅದರ ಫಲವೇ ಈ ನಿಷೇಧಗಳು.

'ಕಲೆ ಇರುವುದು ಜನರಿಗಾಗಿ' ಎಂದು ನಂಬಿದ ಖಾಜಿ ನಜರುಲ್ ಇಸ್ಲಾಮ್ ಅವರಲ್ಲಿ ಮನುಷ್ಯ ಜೀವನದ ಸ್ವಾತಂತ್ರ್ಯ, ಸತ್ಯ, ಸಮಾನ ಹಕ್ಕುಗಳು, ಹಿಂದೂ–ಮುಸ್ಲಿಂ ಸಾಮರಸ್ಯ, ವಿಶ್ವಬಂಧುತ್ವ ಇವೆಲ್ಲವೂ ಅವರ ಕಾವ್ಯವನ್ನು ಪೋಷಿಸಿರುವ ಅಂಶಗಳು. ಇಂತಹ ಮೇರು ವ್ಯಕ್ತಿತ್ವದ ಕವಿಗಳ ಪಠ್ಯಗಳನ್ನೂ ನಿಷೇಧಿಸಿದರೆ, ನಮ್ಮ ವಿದ್ಯಾರ್ಥಿಗಳ ಜ್ಞಾನದ ಪರಿಧಿಗಳು ವಿಸ್ತರಿಸುವುದು ಹೇಗೆ? ಅವರು ಉದಾರಚರಿತರಾಗುವುದು ಹೇಗೆ? ಈ ರೀತಿಯ ನಿಷೇಧ ಪ್ರವೃತ್ತಿಯು ಅಂತಿಮವಾಗಿ ನಮ್ಮ ಬೌದ್ಧಿಕ ವಿಕಾಸಕ್ಕೆ ಕುಠಾರಪ್ರಾಯವಾಗಬಹುದು! ಒಂದು ಜನಾಂಗವನ್ನೇ ಗುರಿಯಾಗಿಸಿಕೊಂಡಿರುವ ಮತೀಯ ಪೂರ್ವಗ್ರಹವುಳ್ಳ ಮನಸ್ಸಿನವರಿಗೆ ಖಾಜಿ ನಜರುಲ್ ಇಸ್ಲಾಮ್ ಅವರ ಮಾನವತೆಯ ಧ್ವನಿ ಬೇಡವಾದ ಅಭಿವ್ಯಕ್ತಿಯಾಗಿರಬಹುದು! ಆದರೆ ಭಾರತದ ಜಾತ್ಯತೀತ ಪರಂಪರೆಗೆ ಇಂತಹ ಸಾಮರಸ್ಯ ಪಠ್ಯಗಳ ಅವಶ್ಯಕತೆ ಯಾವಾಗಲೂ ಇರುತ್ತದೆ. ಭಾರತದ ಹೆಸರಾಂತ ಸ್ವಾತಂತ್ರ್ಯ ಹೋರಾಟಗಾರ, ಮೌಲಾನ ಅಬ್ದುಲ್ ಕಲಾಮ್ ಆಜಾದ್ 'ಭಾರತಕ್ಕೆ ಸ್ವಾತಂತ್ರ್ಯ ಸಿಗದಿದ್ದರೆ ಅದು ಭಾರತೀಯರಿಗಷ್ಟೇ ನಷ್ಟ. ಆದರೆ ಹಿಂದೂ ಮುಸ್ಲಿಂ ಸಾಮರಸ್ಯ ಏರ್ಪಡದಿದ್ದರೆ ಅದು ಮಾನವತೆಗೆ ನಷ್ಟ. ನನ್ನ ಮೊದಲ ಪ್ರಾಶಸ್ತ್ಯ ಸಾಮರಸ್ಯ' ಎಂದು ಬಹು ಹಿಂದೆಯೇ ನುಡಿದಿದ್ದ ಮಾತುಗಳು ಇಂದಿಗೆ ಹೆಚ್ಚು ಅರ್ಥಪೂರ್ಣ.

ತಮ್ಮ ನಂಬಿಕೆಗಳನ್ನು ಚಿಂತನೆಗೆ ಒಡ್ಡುವ ವೈಚಾರಿಕ ಪಠ್ಯಗಳನ್ನು ಮತೀಯ ಸಮಾಜ ನಿಷೇಧಿಸುವ ಪ್ರವೃತ್ತಿ ಭಾರತಕ್ಕೆ ಹೊಸದೇನಲ್ಲ! ಈ ಹಿಂದೆ ಕುವೆಂಪು ಅವರ 'ಶೂದ್ರ ತಪಸ್ವಿ' ಇಂತಹುದೇ ಜಡವಾದಿಗಳ ಆಕ್ರಮಣಕ್ಕೆ ಒಳಗಾಗಿತ್ತು. ಹಾಗೆಯೇ ಎ.ಕೆ. ರಾಮಾನುಜನ್ ಅವರ 'ಮುನ್ನೂರು ರಾಮಾಯಣಗಳು' ಪಠ್ಯವನ್ನೂ ಕೆಲವು ಸಂಘಟನೆಗಳ ಒತ್ತಾಯದ ಮೇರೆಗೆ ಹಿಂಪಡೆಯಲಾಗಿತ್ತು. ಕರ್ನಾಟಕದ ಇತಿಹಾಸಕ್ಕೆ ದೊಡ್ಡ ಕೊಡುಗೆ ನೀಡಿದ ಬಿಜಾಪುರದ ಎರಡನೆಯ ಇಬ್ರಾಹಿಂ ಆದಿಲ್ ಶಾನ ಆಳ್ವಿಕೆಯ ಅಪರೂಪದ ವಿವರಗಳು ನಮ್ಮ ಶೈಕ್ಷಣಿಕ ವಲಯಕ್ಕೆ ಸಂಪೂರ್ಣವಾಗಿ ಬಂದಿಲ್ಲ! ಇವೆಲ್ಲಾ ಭಾರತದ ಗೆದ್ದಲು ಹಿಡಿದಿರುವ ಶಿಕ್ಷಣ ವ್ಯವಸ್ಥೆಯಲ್ಲಿರುವ ಟೊಳ್ಳುತನ ಹಾಗೂ ಅಲ್ಲಿನ ಆತ್ಮವಂಚನೆಯು ನಮ್ಮನ್ನು ವಿಹ್ವಲಗೊಳಿಸುತ್ತದೆ.

ಭಾರತ ಎನ್ನುವುದು ಬಹುಧರ್ಮೀಯರ, ಬಹು ನಂಬಿಕೆ ಹಾಗೂ ಬಹುಭಾಷಿಕರಿರುವ ವಿಶ್ವವ್ಯಾಪಿ ಸಮಾಜ. ಪ್ರಚೋದನೆಗಳಿಂದ ಬೇರ್ಪಡಿಸಲಾಗದ ಅಂತರ್ ಸಂಬಂಧವಿರುವ ಸಮಾಜದ ಬೌದ್ಧಿಕ ಚಿಂತನೆಯನ್ನು ಊನಗೊಳಿಸುವುದು, ಬಹುತ್ವದ ಮೇಲಿನ ದಾಳಿ ಎಂದೇ ತಿಳಿಯಬೇಕಾಗುತ್ತದೆ. ಕಲೆ ಮತ್ತು ಸಾಹಿತ್ಯವು ಸಂಸ್ಕೃತಿಯ ಅಸ್ಮಿತೆಯನ್ನು ಕಳೆದುಕೊಳ್ಳದೆ ತನ್ನತನವನ್ನು ಉಳಿಸಿಕೊಳ್ಳಬೇಕು. ಈ ಮೂಲಕ ಶಿಕ್ಷಣ ವ್ಯವಸ್ಥೆಯು ಉನ್ನತ ಆದರ್ಶದ ಮಾನವತಾವಾದವನ್ನು ತನ್ನ ಶೈಕ್ಷಣಿಕ ಧರ್ಮವನ್ನಾಗಿ ಸ್ವೀಕರಿಸಬೇಕಾಗಿದೆ. ಜ್ಞಾನವೆನ್ನುವುದು ಬರೀ ವಿಶ್ವವಿದ್ಯಾಲಯಗಳಲ್ಲಿ ಮಾತ್ರವೇ ದೊರಕುವುದಿಲ್ಲ! ಅದು ಜನಸಾಮಾನ್ಯರ ಬದುಕಿನಲ್ಲೂ, ವಿವಿಧ ಕಾಯಕ ಜೀವಿಗಳ ನಡುವೆಯೂ ದೊರೆಯಬಲ್ಲದು! ಈ ನಾಡಿನ ಶ್ರಮಣ ಹಾಗೂ ವಚನ ಪರಂಪರೆ ಭಾರತೀಯ ತತ್ವಜ್ಞಾನಕ್ಕೆ ನೀಡಿರುವ ಕೊಡುಗೆ ಬಂದದ್ದೇ ಇಂತಹ ಕಾಯಕಜೀವಿಗಳಿಂದ ಎಂಬುದನ್ನು ಮರೆಯಬಾರದು! ಒಂದು ದೇಶ ಅಥವಾ ಸಂಸ್ಕೃತಿಯನ್ನು ಕಟ್ಟುವ ಕೆಲಸವು ಮೂಲಭೂತವಾಗಿ ಒಂದು ಸಾಂಸ್ಕೃತಿಕ ಕ್ರಿಯೆ ಎಂಬುದನ್ನು ಮರೆಯುವ ಹಾಗಿಲ್ಲ! ಸಾಮರಸ್ಯ, ಸ್ವೀಕರಿಸುವ ಗುಣವಿಲ್ಲದ ವಿದ್ವತ್ತು ಯಾರನ್ನೂ ಉನ್ನತಿಗೇರಿಸದು! ಹಾಗೆಯೇ ಉದಾತ್ತ ಚಿಂತನೆ ಮತ್ತು ಕೃತಿಗಳನ್ನು ತಡೆಯುವ 'ಗೋಡೆಗಳೆಲ್ಲ ಬಂಧನಗಳಲ್ಲ' ಎಂಬುದನ್ನೂ ನಮ್ಮ ಶಿಕ್ಷಣ ವ್ಯವಸ್ಥೆ ತಿಳಿಯಬೇಕು.

'ಎಲ್ಲಿ ಮನ ನಿರ್ಭಯದಿ ತಲೆಯೆತ್ತಿ ನಡೆಯುವುದೋ/ ಎಲ್ಲಿ ಜ್ಞಾನವು ಮುಕ್ತವಾಗಿರುವುದೋ/ ಎಲ್ಲಿ ಲೋಕವು ಸಂಕುಚಿತ ಮನೆಗೋಡೆಗಳಿಂದಾಗಿ/ ಚೂರು ಚೂರಾಗಿ ಒಡೆದಿಲ್ಲವೋ/ ಎಲ್ಲಿ ಮನಸ್ಸು ನಿರಂತರವೂ ವಿಸ್ತಾರಗೊಳ್ಳುವ/ ಆಲೋಚನೆ ಹಾಗೂ ಕ್ರಿಯೆಯೆಡೆಗೆ/ ನಿನ್ನಿಂದ ನಡೆಸಲ್ಪಡುತ್ತಿದೆಯೋ/ ಆ ಸ್ವಾತಂತ್ರ್ಯದ ಸ್ವರ್ಗಕ್ಕೆ... ಈ ನನ್ನ ನಾಡು ಎಚ್ಚರಗೊಳ್ಳಲಿ' – ಗುರುದೇವ ರವೀಂದ್ರರ ಈ ಗೀತೆ ನಮ್ಮ ಶಿಕ್ಷಣ ಕೇಂದ್ರಗಳ ಜ್ಞಾನ ಚಕ್ಷುಗಳನ್ನು ತೆರೆಸಬೇಕು.

ನಿಷೇಧ ಸಂಸ್ಕೃತಿಯ ಸುತ್ತಲೂ ಕವಿದಿರುವ ಕಾರ್ಮೋಡಗಳನ್ನು ನೋಡಿದರೆ ಆನಂದ ಕುಮಾರಸ್ವಾಮಿ ಅವರ ರೂಪಕದ ಮಾತೊಂದು ನೆನಪಾಗುತ್ತದೆ: 'ದೂಳು ಮುಚ್ಚಿದ ಪಟ್ಟಣದಲ್ಲಿ ಯಾರೂ ಮುಕ್ತಿಯನ್ನು ಪಡೆಯಲಾರರು'.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಮನುಷ್ಯನಿಗೆ ಜೀವನದಲ್ಲಿ ಬಹಳಷ್ಟು ಸಂಕಷ್ಟಗಳು, ಯಶಸ್ಸನ್ನು ಸಂಭ್ರಮಿಸಲು ಬೇಕಾಗುತ್ತವೆ.
  —ಎ.ಪಿ.ಜೆ. ಅಬ್ದುಲ್ ಕಲಾಂ
- ನನ್ನನ್ನು ಇಂದ್ರ ಚಂದ್ರ ದೇವೇಂದ್ರನೆಂದು ಹೊಗಳುವುದು ನನಗಿಷ್ಟವಿಲ್ಲ. ನಾನು ನಿಮ್ಮಂತೆ ಶ್ರೀಸಾಮಾನ್ಯ.
  —ಬಿ.ಆರ್. ಅಂಬೇಡ್ಕರ್
- ಧೈರ್ಯದಿಂದ ಸತ್ಯವನ್ನು ಎದುರಿಸು. ಜಯ ಎಂಬುದು ಕಟ್ಟಿಟ್ಟ ಬುತ್ತಿ.
  —ಸ್ವಾಮಿ ವಿವೇಕಾನಂದ
- ಅಹಿಂಸೆ, ಸತ್ಯವನ್ನೇ ನುಡಿಯುವುದು, ಎಲ್ಲ ಪ್ರಾಣಿಗಳಲ್ಲಿಯೂ ದಯೆ, ಶಾಂತಿ, ಶಕ್ತಿಯಿದ್ದಷ್ಟು ದಾನ – ಇವನ್ನು ನಡೆಸುವುದೇ ಸಂಸಾರಿಗಳ ಪಾಲಿನ ಧರ್ಮ.
  —ಸುಭಾಷಿತ
- ಬಡವನಾದವನು ಸುಖವಾಗಿ ನಿದ್ರಿಸುತ್ತಾನೆ. ಹಾಗೆಯೇ ಏಳುತ್ತಾನೆ.
  —ಮಹಾಭಾರತ
- ನಮ್ಮ ನಿರ್ಧಾರಗಳು ಕೆಲವೊಮ್ಮೆ ಸೂಕ್ತವಾಗಿರುವುದಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಬೇಕು. ಅಂತಹ ವೈಫಲ್ಯ ಅರ್ಥ ಮಾಡಿಕೊಳ್ಳುವುದು ಯಶಸ್ಸಿನ ಭಾಗ.
  —ಅರಿಯನ್ನಾ ಹಫಿಂಗ್ಟನ್
- ಇಲ್ಲದವನು ಬಡವನಲ್ಲ, ಇನ್ನೂ ಬೇಕೆನ್ನುವವನು ಬಡವ.
  —ಸೆನೇಕಾ
- ನಮ್ಮೆಲ್ಲ ಸಮಸ್ಯೆಗಳು ಪರಿಹಾರಗೊಳ್ಳುವ ತನಕ ಚಳವಳಿಗಳನ್ನು ಜೀವಂತವಾಗಿಟ್ಟಿರುವುದು ಅತ್ಯಗತ್ಯ.
  —ಕುವೆಂಪು